ಒಂಉದ ಹೇಳಿಕೆಯನ್ನೇ ಪ್ರಸ್ತಾಪ ಮಾಡುತ್ತಿದ್ದೆ. ಆದರೆ, ನನಗೆ ಇರತಕ್ಕ ಮಾಹಿತಿಯ ಆದಾರದ ಮೇಲೆ ಈ ಕರಾವಳಿ ಅಲೆ ಪತ್ರಿಕೆ ..

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಹಾಗಾದರೆ ಸೋಮವಾರ ಉತ್ತರ ಕೊಡಿ ಪರವಾಗಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಹಾಗಾದರೆ ಲಿಖಿತ ಹೇಳಿಕೆಯನ್ನು ಸೋಮವಾರ ಕೊಡುತ್ತೇನೆ.

(ಖ) **ವಿಷಯ : ಉಡುಪಿ ಮುನಿಸಿಪಾಲಿಟಿಗೆ ಸುವರ್ಣಬಜೆ ಎಂಬ ಜಾಗದಲ್ಲಿ ಕಟ್ಟಿರುವ ಅಣೆಕಟ್ಟಿನಿಂದ ನೀರನ್ನು ತರಲು ಅನುಮತಿ ನೀಡುವ ಬಗ್ಗೆ:**

ಶ್ರೀ ಕೆ.ಜಯಪ್ರಕಾ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ಸುವರ್ಣಬಜೆ ಎಂಬ ಜಾಗದಲ್ಲಿ ಉಡುಪಿ ಮುನಿಸಿಪಾಲಿಟಿಗೆ ನೀರನ್ನು ತರಲು ಅಣೆಕಟ್ಟಿಯನ್ನು ಕಟ್ಟಿದ್ದಾರೆ. ಆ ಭಾಗದ ರೈತರು ಮೊದಲಿನಿಂದಲೂ ಅಲ್ಲಿ permission ತೆಗೆದುಕೊಂಡು motor ಇಟ್ಟು ನೀರುನ್ನು ತೆಗೆದುಕೊಳ್ಳುತ್ತಿದ್ದರು. ಈಗ Municipal Administration Minister ಇಲ್ಲ. ಆದ್ದರಿಂದ ಮಾನ್ಯ ಪ್ರಕಾಶ್ ರವರು ಅದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಕೊಟ್ಟಿರಾಯಿತು. ಆ ಅಣೆಕಟ್ಟೆಯಿಂದ ರೈತರು ನೀರನ್ನು ತೆಗೆಯುತ್ತಿದ್ದಾಖುಎ. ಆದರೆ ಈಗ ಜಿಲ್ಲಾ ಆಡಳಿತ ಡಿ.ಸಿ.ಯವರೇ ಈಗ Municipal administrator. ಅವರು ರೈತರು ನೀರನ್ನು ತೆಗೆಯಬಾರದೆಂದು ಕಟ್ ಔಟ್ ನ್ನೆ ತೆಗೆದುಕೊಂಡು ಹೋಗಿದ್ದಾರೆ. ಅನಂತರ ೧೦ ದಿವಸಕ್ಕೊಂದು ಸಲ ನೀರನ್ನು ತೆಗೆಯಬೇಕೆಂದು ಮಾಡಿದ್ದರು. ಆ ರೈತ ಏನಾಗಬೇಕು? ತೋಟಕ್ಕೆ ನೀರನ್ನು ಬಿಡಲಾಗುವುದಿಲ್ಲ. ಉಡುಪಿ ಮುನಿಸಿಪಾಲಿಟಿ ಏರಿಯಾಕ್ಕೆ ನೀರನ್ನು ಕೊಡಬಾರದೆಂದಲ್ಲ. ಆ ಭಾಗದ ರೈತರಿಗೆ ವಾರಕ್ಕೆ ಒಂದೆರಡು ಬಾರಿಯಾದರೂ ನೀರನ್ನು ತೆಗೆಯಲು ಅವಕಾಶ ಮಾಡಿಕೊಡಬೇಕು.

ಇಲ್ಲದಿದ್ದರೆ ಅವರ ತೋಟವೆಲ್ಲಾ ಸುಟ್ಟುಹೋದರೆ, ಅವರ ಬೆಳೆಯಲ್ಲಾ ನಾಶವಾದರೆ ಅವರಿಎ ಪರಹಾರವನ್ನು ತುಂಬಿಕೊಡಲು ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ರೈತರು ವಾರಕ್ಕೆ ಮೂರು ದಿವಸವಾದರೂ ನೀರನ್ನು ತೆಗೆಯಲು ಅವಕಾಶ ಮಾಡಿಕೊಡಲು ಜಿಲ್ಲಾ ಆಡಳಿತಕ್ಕೆ ಆದೇಶ ನೀಡೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು, ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ಸಾಧಾರಣವಾಗಿ ಇಂಥ ಅಣೆಕಟ್ಟೆಯನ್ನು ಕಟ್ಟಿದಾಗ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ಇರುತ್ತದೆ. ಅನಮತರ ನೀರಾವರಿಗೆ ಇರುತ್ತದೆ. ಆದರೆ, ಹತ್ತು ದಿವಸಕ್ಕೆ ಒಂಧು ಸಲ ನೀರನ್ನು ತಗೆದುಕೊಂಡು ಹೋಗಬೇಕೆಂಬ ಆದೇಶವನ್ನು ಮಾನ್ಯ ಸದಸ್ಯರು ತಂದಿರುವುದರಿಂದ ನಾನು ಮಾನ್ಯ ಮಂತ್ರಿಗಲ ಗಮನಕ್ಕೆ ಇದನ್ನು ತಂದು ಸೋಮವಾರದ ದಿವಸ ಸರಿಯಾದ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ನೆ.ಲಾ. ನರೇಂದ್ರಬಾಬು (ರಾಜಾಜಿ ನಗರ) ಮಾನ್ಯ ಉಪಾಧ್ಯಕ್ಷರೆ : ತಮ್ಮ ಮೂಲಕ ಮಾನ್ಯ ಗೃಹ ಸಚಿವರಲ್ಲಿ ಕೇಳುವುದೇನೆಂದರೆ, ಒಂದೇ crime number ಅಡಿಯಲ್ಲಿ ಆಗಿರತಕ್ಕ ಎರಡು ಅಪರಾಧಗಳನ್ನು ಮಾನ್ಯ ಗೃಹ ಸಚಿವರ ಗಮನಕ್ಕೆ ತರಬಯಸುತ್ತೇನೆ. ನಮ್ಮ ಕ್ಷೇತ್ರದ ವ್ಯಾಪ್ತಿಯ ಸುಬ್ರಮಣ್ಯನಗರ ಠಾಣೆಯ ಅಡಿಯಲ್ಲಿ ಒಂದೇ crime ನ ಅಡಿಯಲ್ಲಿ ಒಂದು ರಾಬರಿ ೫೫ ಲಕ್ಷದ ೩೦ ಸಾವಿರ ಹಣವನ್ನು ಒಬ್ಬ ಸ್ಕೂಟರ್ ನಿಂದ ಅಪಹರಿಸಿದ ಎಂಬ ಒಂದು ದೂರು. ಇನ್ನೊಂದು, ಎರಡು ದಿವಸದ ನಂತರ ಅದೇ ಠಾಣೆಯ ವ್ಯಾಪ್ತಿಯಲ್ಲಿ ಒಂದು ಸ್ಕೂಟರ್ ಕಳ್ಳತನವಾಯಿತು ಎಂದು ಎರಡು ದೂರುಗಳನ್ನು ಒಂದೇ crime ನ ಅಡಿಯಲ್ಲಿ ದಾಖಲು ಮಾಡಿ ಆ ಹಣ ನಂತರ ಸಿಕ್ಕಿತು ಎಂದು ಆ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ಆರಕ್ಷಕ ಇಲಾಖೆಯ ಆ ಠಾಣೆಯಲ್ಲಿ ಆಗಿರತಕ್ಕದ್ದು ಒಂದು ಗಂಭೀರವಾದ